## ಕವಿತೆ




## ಸತ್ಯಮಂಗಲ ಮಹಾದೇವ

ಕಲೆ: ರೂಪಶ್ರೀ ಕಲ್ಲಿಗನೂರು


# ಗೋಡೆಗಳು ಮಾತನಾಡುತ್ತಿಲ್ಲ

ಇತ್ತೀಚೆಗೆ ಆದೇಕೋ
ಈ ಗೋಡೆಗಳು ಮಾತನಾಡುವುದನ್ನು ನಿಲ್ಲಿಸಿವೆ
ಹೆಚ್ಚಾಗಿ ಕೇಳಿಸಿಕೊಳ್ಳುವುದನ್ನೇ ಕಲಿತಿವೆ
ಕೇಳಿಸಿಕೊಳ್ಳುವುದು ಶ್ರೇಷ್ಠವೆಂದು ಭಾವಿಸಿದ್ದೆ
ಮೌನಕ್ಕೆ ಮನಸ್ಸು ಕೊಟ್ಟು ಕನಸಿಗೆ ಕಸುವು ಕೊಟ್ಟು
ಕೊರಳು ತಬ್ಬುತ್ತಿದ್ದ ಗೋಡೆಗಳ ಏಕಾಂತವೀಗ
ಫೇಸ್ಬುಕ್ಕು ವಾಟ್ಸಪ್ಪುಗಳ ಮೈಮೇಲೆ ಹರಿದಾಡಲು
ಸಾಲುಗಟ್ಟಿ ನಿಂತಿವೆ
ದೇವ ದರ್ಶನಕ್ಕೆ ಭಕ್ತರು ಕ್ಯೂ ನಿಂತ ಹಾಗೆ

ನೋವಿಗೆ ಹೆಗಲು ಕೊಟ್ಟು ಸಾಂತ್ವನದ ಮಾತುಗಳನ್ನು
ನೊಂದವರಿಗೆ ದಾಟಿಸುತ್ತಿದ್ದವು
ಮನದ ಏಕಾಂತದಲ್ಲಿ ಬಿಡಿಸುವ ಚಿತ್ರಗಳಿಗೆ ಹಾಳೆಯಾಗುತ್ತಿದ್ದವು
ತಡವರಿಸಿ ತಡಕಾಡಿ ದುಃಖದ ಗೊಡವೆಗಳಲ್ಲಿ
ಬಸವಳಿದು ಬಾಗಿದ ಬೆನ್ನಿಗೆ ಬೆನ್ನಾಗುತ್ತಿದ್ದವು
ಹಿರಿಯರು ಮನೆಗೆ ಬಂದಾಗ
ಮೊಬೈಲ್ ಹಿಡಿದು ಕೂತ ಮಕ್ಕಳ ಹಾಗೆ
ಈ ಗೋಡೆಗಳು ನಿಂತಿವೆ ನಿಂತೇಯಿವೆ
ಕಂಡು ಕಾಣದ ಹಾಗೆ ಕೇಳಿಯೂ ಕೇಳದ ಹಾಗೆ

ನಗುವವರ ನಗುವನ್ನು
ಮಣ್ಣಲ್ಲಿ ಮಣ್ಣಾದವರ ನಗೆ ಹೊತ್ತು
ಗಡಿಯಾರದ ಘನತೆಗೆ ಸಾಕ್ಷಿಯಾಗಿ
ಕ್ಯಾಲೆಂಡರಿನ ಕ್ರಮಾನುಗತಿಯ ಕಾಲದ ನಡೆಗೆ ಕೊರಳೊಡ್ಡಿ
ವಿದ್ಯುತ್ತಿನ ವೈರುಗಳನ್ನು ತಮ್ಮೊಳಗೆ ಅಡಗಿಸಿ
ವಿದ್ವತ್ತಿನ ಮಾತುಗಳಿಗೆ ವಿದ್ಯುತ್ ಸಂಚಾರ ಕೊಡುತ್ತಿದ್ದ ಈ
ಗೋಡೆಗಳು ಆದೇಕೋ ಇಂದು ಮಾತನಾಡುತ್ತಿಲ್ಲ
ಬಣ್ಣ ಬಳಿಸಿ ಮುದ್ದಿಸಿ ರಮಿಸಿ ಹಬ್ಬದ ತೋರಣ ಕಟ್ಟಿದರೂ
ಶಾಸ್ತ್ರಕ್ಕಾದರು ಒಂದು ಸಣ್ಣ ಮುಗುಳುನಗೆಯಿಲ್ಲ

